


### ಚಿನ್ನ ದಂತಹ ಹೂಡಿಕೆ

ಸುಧಾ ಜುಲೈ14ರ ಮುಖಪುಟ ಅತ್ಯಾಕರ್ಷಕ ವಾಗಿ ಮೂಡಿಬಂದಿದೆ. ಚಿನ್ನ ಆಭರಣಕ್ಕೆ ಮಾತ್ರವಲ್ಲ, ಹೂಡಿಕೆಗೆ ಇರುವ ಹಲವಾರು ಮಾಹಿತಿಗಳನ್ನು ಸುಧಾ ಹೆಗಡೆಯವರ ಮುಖಪುಟ ಲೇಖನ ನೀಡಿದೆ.

-ಜಿ.ಕೆ.ಶ್ರೀಮತಿ, ಬೆಂಗಳೂರು/ ನಾರಾಯಣ ಯಾಜಿ, ಶಿರಾಲಿ/ ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ/ ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

### ಬಡವರಿಗೇನು ಪ್ರಯೋಜನ?

ಚಿನ್ನದ ಮೇಲೆ ಹಣ ಹೂಡುವವರಿಗೆ ಹೆಚ್ಚಿನ ಮಾಹಿತಿಯನ್ನು ಲೇಖನ ನೀಡಿದೆ. ಆದರೆ ಹಣದುಬ್ಬರದಿಂದ ನರಳುತ್ತಿರುವ ಬಡವರಿಗೆ ಇದರಿಂದ ಪ್ರಯೋಜನವೇನು? ಇಂದಿನ ಚಿನ್ನದ ಧಾರಣೆ ನೋಡಿದರೆ ಬಡವರು ಕನಸಿನಲ್ಲಿಯೂ ಚಿನ್ನವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ.

-ಎನ್.ಪ್ರಕಾಶ, ದೇವನಹಳ್ಳಿ

### ಆಣೆ ಪ್ರಮಾಣ ಯಾವ ಲೆಕ್ಕ?

'ಆಣೆ ಪ್ರಮಾಣಕ್ಕೊಂದು ಸಾಣೆ' ವೈ-ಚಾರಿಯವರ ಬರಹ ಅರ್ಥಪೂರ್ಣ. ಮನಸ್ಸಾಕ್ಷಿ ಇಲ್ಲದೆ ತನ್ನತನವನ್ನೇ ತೊರೆದಿರುವವರಿಗೆ ಆಣೆ, ಪ್ರಮಾಣಗಳು ಯಾವ ಲೆಕ್ಕ?

-ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ/ ಕೆ.ಪ್ರಕಾಶ್, ಚಿಕ್ಕಜೋಗಿಹಳ್ಳಿ

### ಶಿಕ್ಷಕರಿಗೆ ಮಾರ್ಗದರ್ಶಿ

ಪರಮೇಶ್ವರಯ್ಯ ಸೊಪ್ಪಿಮಠ ಅವರ 'ಶಿಕ್ಷಕರಿಗೆ ಕಿವಿಮಾತು' ಲೇಖನ ಚೆನ್ನಾಗಿತ್ತು. ಇದೊಂದು ಮಾರ್ಗದರ್ಶಿ.

-ರವೀಂದ್ರನಾಥ ಯಡಹಳ್ಳಿ, ಬೀಳಗಿ/ ರಾಜಶೇಖರ ಗೌಡ, ಕೊಟ್ಟೂರು/ ಟಿ.ಎನ್.ಸರಸ್ವತಿ, ತಿಪಟೂರು

### ಹಲಸು ದನಕರುಗಳಿಗೂ ಇಷ್ಟ

ಖ್ಯಾತ ಕಥೆಗಾರ ಕೆ.ಟಿ.ಗಟ್ಟಿಯವರು ಬರೆದಂತೆ ಹಲಸು ದನಕರುಗಳು ಇಷ್ಟಪಡುವ ಆಹಾರ. ದನಗಳು ಬೀಜವನ್ನು ತಿನ್ನದೇ ಇಡೀ ಹಣ್ಣನ್ನು ಇಷ್ಟಪಟ್ಟು ತಿನ್ನುತ್ತವೆ. ಇದರಿಂದ ಕಾಯಿಗಳು ಕೊಳೆಯುವುದು ತಪ್ಪುತ್ತದೆ.

-ಬಿ. ವೀಣಾ ನಾಗರಾಜ ಜೋಷಿ, ಬಾರಕೂರು

### ಸಾಕ್ಷರರಿಂದಲೇ ಶೋಷಣೆ?

ವೈನತೇಯ ಅವರು 'ಶೋಷಣೆಯ ಸಾರ್ವತ್ರಿಕತೆ' ಎಂಬ ವಿಚಾರ ಲಹರಿಯಲ್ಲಿ ಶೋಷಣೆಯ ಹಿಂದೆ ಮಾನವನ ಮೆದುಳು ಕೆಲಸ ಮಾಡುವುದನ್ನು ದೃಷ್ಟಾಂತದೊಂದಿಗೆ ವಿವರಿಸಿದ್ದಾರೆ. ಅಂದರೆ ಸಮಾಜದ ಎಲ್ಲ ಶೋಷಣೆಯೂ ಬುದ್ಧಿಜೀವಿ ಹಾಗೂ ಸಾಕ್ಷರರಿಂದಲೇ ನಡೆಯುವುದೇ?

-ಕೊಹಿಮ, ಬಸರಕೋಡು/ ಮಹಾವೀರ ಕಾಸರ, ಶಿವಮೊಗ್ಗ

### ಹನಿ ತಂದ ರೋಮಾಂಚನ

'ಏನು ನಿನ್ನ ಹನಿಗಳ ಲೀಲೆ' ಎಚ್.ಸತೀಶ್ ಸೆರೆ ಹಿಡಿದ ಚಿತ್ರಗಳು ಮೈಮನಗಳಿಗೆ ರೋಮಾಂಚನ ನೀಡಿದವು.

-ಕೆ.ವಿ.ಶಿವಕುಮಾರ್, ಕಾಳಿಹುಂಡಿ

### ಮಾದರಿ ಹೆರಿಗೆ ಆಸ್ಪತ್ರೆ

ಬೆಂಗಳೂರಿನ ನರ್ಸಿಂಗ್ ಹೋಂಗಳಲ್ಲಿ ಸಹಜ ಹೆರಿಗೆಗೆ ಮೂರು ದಿನ ಕಡ್ಡಾಯವಾಗಿ ಇಟ್ಟುಕೊಂಡು ಐವತ್ತು ಸಾವಿರ ರೂ.ದೋಚುತ್ತಾರೆ. ಆದರೆ ಜಯಂತ್ ಪಡುಬಿದ್ರಿ ಪರಿಚಯಿಸಿರುವ 'ಹೀಗೊಂದು ಹೆರಿಗೆ ಮನೆ'ಯಲ್ಲಿ ಸಹಜ ಹೆರಿಗೆಗೆ ಬರೀ 5 ರೂ. ಎಂದರೆ ನಂಬಲಾಗಲಿಲ್ಲ. ದೊಡ್ಡ ಊರುಗಳಲ್ಲಿರುವ ಹೆರಿಗೆ ಆಸ್ಪತ್ರೆಯವರ ಕಣ್ಣು ತೆರೆಸಬೇಕಾಗಿದೆ.

-ಪಿ.ಎಸ್.ಶ್ರೀವತ್ಸ, ಬೆಂಗಳೂರು/ ಪಿ.ಜೆ.ರಾಘವೇಂದ್ರ, ಮೈಸೂರು

### ಷಟ್‌ಪುತ್ರೀ ಸೌಭಾಗ್ಯವತೀ ಭವ!

'ಆ 6 ಹುಡುಗಿಯರು' (ವಂಡರ್‌ಪುಟ) ಅವರ ಮಹಾತಾಯಿಗೆ ಮದುವೆ ಸಂದರ್ಭದಲ್ಲಿ ಯಾರಾದರೂ ಮಹಾಮಹಿಮರು 'ಷಟ್‌ಪುತ್ರೀ ಸೌಭಾಗ್ಯವತೀ ಭವ!' ಎಂದು ಆಶೀರ್ವದಿಸಿದ್ದರೆ? ('ಅಷ್ಟಪುತ್ರ... ಎಂದ ಹಾಗೆ) 'ಇದು ಭಾಗ್ಯವಿದು ಭಾಗ್ಯವಿದು ಭಾಗ್ಯವಯ್ಯಾ!' ಎಂದು ಆ ದಂಪತಿ ಸಂಭ್ರಮಿಸಿರಬಹುದು ಉದ್ದಕ್ಕೂ!

-ಸಿ.ಪಿ.ಕೆ., ಮೈಸೂರು

### ಅಗ್ರಮಾನ್ಯ ವಾರಪತ್ರಿಕೆ

'ಸುಧಾ' ವಾರಪತ್ರಿಕೆಯ ಓದುಗರ ಸಂಖ್ಯೆ ಈಗ 4.96ಲಕ್ಷ ದಾಟಿದ್ದು ಕರ್ನಾಟಕದ ಅಗ್ರಮಾನ್ಯ ವಾರಪತ್ರಿಕೆಯಾಗಿರುವುದು ಹೆಮ್ಮೆಯ ಸಂಗತಿ. 2011ರ ಜನಗಣತಿ ಪ್ರಕಾರ ಕರ್ನಾಟಕದ ಜನಸಂಖ್ಯೆ 6.12ಕೋಟಿ. ನೂರು ಜನರಿಗೊಂದು 'ಸುಧಾ' ಆಗಬೇಕಾದರೆ, ಈ ಸಂಖ್ಯೆ ಶೀಘ್ರವೇ 6.12 ಲಕ್ಷ ತಲುಪಲಿ.

-ನಾರಾಯಣ ಯಾಜಿ, ಶಿರಾಲಿ

### ಎಲ್ಲ ವರ್ಗದವರಿಗೆ ಇಷ್ಟ

'ಸುಧಾ' ಇತರೆಲ್ಲ ವಾರಪತ್ರಿಕೆಗಳಿಗಿಂತ ಮುಂದೆ ಇರುವುದಕ್ಕೆ ಕಾರಣವೆಂದರೆ, 64 ವಿದ್ಯೆಗಳಲ್ಲಿ ಪಾರಂಗತವಾದಂತಹ ಲೇಖನಗಳನ್ನು ಉಣಬಡಿಸುತ್ತಿರುವುದೇ ಆಗಿದೆ. ಎಲ್ಲ ವರ್ಗದವರಿಗೆ ಇಷ್ಟವಾಗುವ ಬರಹ, ಲೇಖನ, ಸಂದರ್ಶನಗಳು ಇದರಲ್ಲಿ ಪ್ರಕಟವಾಗುತ್ತಿದ್ದು, ಈ ಕೈಂಕರ್ಯ ಮುಂದುವರಿಯಲಿ.

-ರಾಜೇಂದ್ರ ಹೆಗಡೆ, ಹಾವೇರಿ/ ಎ.ಕೆ.ಪಟ್ಟಾಭಿ, ಬೆಂಗಳೂರು

### ಹಾಸ್ಯ ಲೇಖನಕ್ಕೆ ಆಹ್ವಾನ

ಅಪರಂಜಿ ಹಾಸ್ಯ ಮಾಸಪತ್ರಿಕೆಯು ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯಸ್ಪರ್ಧೆಯನ್ನು ಏರ್ಪಡಿಸಿದ್ದು, ಅಕ್ಟೋಬರ್ 31ರ ಒಳಗಾಗಿ ಲೇಖನಗಳನ್ನು ಬೇಲೂರು ರಾಮಮೂರ್ತಿ, ಉಪಸಂಪಾದಕರು, ಅಪರಂಜಿ, ಸುಕೇಶವ, 96, 2ನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಬಿಟಿಎಂ 1ನೇ ಹಂತ, ಬೆಂಗಳೂರು- 560068 ಈ ವಿಳಾಸಕ್ಕೆ ಕಳಿಸಿಕೊಡುವಂತೆ ಕೋರಲಾಗಿದೆ. ಪ್ರಥಮ- ಒಂದು ಸಾವಿರ ರೂ., ದ್ವಿತೀಯ- 750ರೂ. ಮತ್ತು ತೃತೀಯ 500ರೂ. ಬಹುಮಾನ ನೀಡಲಾಗುವುದು.


ಸಂಧಿವಾತವೇ?
ಕೀಲುಗಳ ನೋವೇ?
ಇನ್ನು ಮುಂದೆ ಯಾತನೆ ಪಡಬೇಕಾಗಿಲ್ಲ....



ಕೀಲು ನೋವು ಮತ್ತು ಸಂಧಿವಾತವು ದೇಹದ ಶಕ್ತಿ ಕುಂದಿಸುವ ರೋಗಗಳಾಗಿದ್ದು, ಪ್ರತಿಯೊಂದು ಕುಟುಂಬಗಳಲ್ಲಿಯೂ ಈ ರೋಗದ ತೊಂದರೆ ಸಾಮಾನ್ಯವಾಗಿರುತ್ತದೆ. ಈ ಕಾಯಿಲೆಗಳ ಸಾಂಕೇತಿಕ ಚಿಹ್ನೆಗಳು ಕೆಳಕಂಡಂತಿರುವವು:

- ಬೆಳಿಗ್ಗೆ ಸಮಯದಲ್ಲಿ ಕೀಲುಗಳ ಸೆಟೆತ ಅಥವಾ ನೋವು ಕಾಣಿಸಿಕೊಳ್ಳುವುದು.
- ನಡೆದಾಡಲು ಮತ್ತು ಮಡಿಸಲು ತೊಂದರೆಯಾಗುವುದು.
- ಕೀಲುಗಳಲ್ಲಿ ಊತ ಅಥವಾ ಒಂದು ರೀತಿಯ ಮೃದುತ್ವ ಉಂಟಾಗುವುದು.

ಇವೆಲ್ಲ ಸಮಸ್ಯೆ ಪರಿಹಾರಕ್ಕೆ ಬೈದ್ಯನಾಥ್ ರೂಮಾ ತೈಲ ನಿಮಗೆ ಅತ್ಯುತ್ತಮ ಪರಿಹಾರೋಪಾಯ. ಇದು 11 ನೈಸರ್ಗಿಕ ಗಿಡಮೂಲಿಕೆಗಳ ಸಂಯೋಜನೆ ಮತ್ತು ನೋವು ನಿವಾರಣೆ ನೈಸರ್ಗಿಕ ತೈಲವನ್ನು ಒಳಗೊಂಡಿದೆ.

ಸಮಸ್ಯೆಯ ಮೂಲಕ್ಕೆ ಈಗ ಚಿಕಿತ್ಸೆ....

ಸಾಮಾನ್ಯವಾಗಿ ತೈಲಗಳು ಮತ್ತು ಬಾಮ್‌ಗಳು ಸಾಂಕೇತಿಕ, ತಾತ್ಕಾಲಿಕ ಪರಿಹಾರ ನೀಡುತ್ತವೆ. ರುಮಾರ್ತೋ ಟ್ಯಾಬ್ಲೆಟ್ ಕೀಲುಗಳ ಸರಾಗ ಚಲನೆಯನ್ನು ಪುನಶ್ಚೇತನ ಗೊಳಿಸುತ್ತದೆ ಮತ್ತು ಕೀಲುಗಳ ಆರೋಗ್ಯವನ್ನು ಕಾಪಾಡುವ ಮೂಲಕ ಮೂಳೆಗಳ ನಿಶ್ಶಕ್ತಿಯನ್ನು ನಿವಾರಿಸುತ್ತದೆ. ಇದು ಪರೀಕ್ಷಿಸಿ ಮತ್ತು ಪ್ರಯೋಗಿಸಿ ವಿಶ್ವಾಸಗಳಿಸಿರುವ ಆಯುರ್ವೇದಿಕ್ ಸೂತ್ರೀಕರಣವಾಗಿದೆ. ಇದು ಅತ್ಯಂತ ಪರಿಣಾಮಕಾರಿಯಾದ ಊತ, ನೋವು ಮತ್ತು ಕಾಯಿಲೆ ಹರಡದಂತೆ ತಡೆಯುತ್ತದೆಂಬುದಕ್ಕೆ ಹೆಸರು ಪಡೆದಿರುವ ಸ್ವರ್ಣ ಭಸ್ಮ ಮತ್ತು ಸಾಲೈ ಗುಗ್ಗುಲ್‌ನಿಂದ ಪುಷ್ಟೀಕರಣಗೊಂಡಿದೆ. ಸಮಸ್ಯೆಯ ಮೂಲ ಕಾರಣಕ್ಕೆ ಚಿಕಿತ್ಸೆ ನೀಡುವ ಮೂಲಕ ಸಂಧಿವಾತ, ಗೌಟ್, ಸೊಂಟದ ವಾಯುನೋವು, ಉಬ್ಬಿದ ರಕ್ತನಾಳ, ಬೆನ್ನುನೋವು, ಸೊಂಟದ ನೋವುಗಳಿಗೆ ಶಾಶ್ವತ ಪರಿಹಾರ ನೀಡುತ್ತದೆ.

ಬೈದ್ಯನಾಥ್
ರುಮಾರ್ತೋ ಟ್ಯಾಬ್ಲೆಟ್ ಮತ್ತು
ರೂಮಾ ತೈಲ




ನಿಮ್ಮ ಕೀಲುಗಳ ಚಲನೆಯನ್ನು ಪುನರ್ ಸ್ಥಾಪಿಸುವುದು.

For Customer care - Kammanhalli : 9663546007, Koramangla : 9591779772